734 (718) ಶ್ರೀ ನಿಂಗಪ್ಪ ಹೆಚ್. (ಕುಣಿಗಲ್):– ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ಅರ್ಹ ಬಿಪಿಎಲ್ ಪಡಿತರದಾರರನ್ನು ಗುರ್ತಿಸುವ ಸಮೀಕ್ಷೆಯಲ್ಲಿ ಅದಕ್ಕೆ ನಿಯೋಜಿಸಿದ ಅಧಿಕಾರಿಗಳು ಅರ್ಹರನ್ನು ಕೈ ಬಿಟ್ಟು ಕರ್ತವ್ಯ ಲೋಪವೆಸಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಯಾವ ಅವಧಿಯೊಳಗಾಗಿ ಅಂತಹವರ ವಿರುದ್ಧ ಯಾವ ರೀತಿಯ ಕ್ರಮ ತೆಗೆದುಕೊಳ್ಳಲಾಗುವುದು ;

(ಇ) ಕೈ ಬಿಟ್ಟು ಹೋಗಿರುವ ಅರ್ಹ ಫಲಾನುಭವಿಗಳನ್ನು ಗುರ್ತಿಸಿ ಪಡಿತರ ಚೀಟಿ ನೀಡುವ ಮೂಲಕ ಅವ್ಯವಸ್ಥೆಯನ್ನು ಸಂಪೂರ್ಣವಾಗಿ ಯಾವ ಅವಧಿಯೊಳಗಾಗಿ ಸರಿಪಡಿಸಲಾಗುವುದು ;

(ಈ) ಪಡಿತರ ಚೀಟಿ ವಿತರಣೆಗಾಗಿ ಶೇಖಡವಾರು ನಿಗದಿ ಮಾಡಲಾಗಿದೆಯೇ ; ಮಾಡಿದ್ದಲ್ಲಿ, ಬಡವರೇ ವಾಸಿಸುವ ಪ್ರದೇಶದಲ್ಲಿ ಅರ್ಹರೂ ಕೆಲವರು ಪಡಿತರ ಚೀಟಿ ಪಡೆಯುವಲ್ಲಿ ವಿಫಲರಾಗುವುದಿಲ್ಲವೆ ; ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಳ್ಳುವುದು ?

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :–

(ಅ) ಬಂದಿದೆ.

(ಆ) ಲೋಪವೆಸಗಿರುವ ಪ್ರಕರಣಗಳಲ್ಲಿ ಅದಕ್ಕೆ ಕಾರಣರಾದ ಅಧಿಕಾರಿ/ನೌಕರರ ವಿರುದ್ಧ ಈಗಾಗಲೇ ಕ್ರಮ ಜರುಗಿಸಲಾಗಿರುತ್ತದೆ. 45 ಜನ ಅಧಿಕಾರಿ/ಸಿಬ್ಬಂದಿಯನ್ನು ಅಮಾನತ್ತು ಮಾಡಲಾಗಿದ್ದು, 79 ಅಧಿಕಾರಿ/ಸಿಬ್ಬಂದಿಗೆ ಕಾರಣ ಕೇಳಿ ನೋಟೀಸು ಜಾರಿ ಮಾಡಲಾಗಿದೆ.

(ಇ) ಮನೆ ಮನೆ ಸಮೀಕ್ಷೆಯಲ್ಲಿ ಫಲಾನುಭವಿಗಳಿಗೆ ಗಣಕೀಕೃತ ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ವಿತರಿಸಲಾಗುತ್ತದೆ. ಜಿಲ್ಲಾಧಿಕಾರಿಗಳಿಗೆ ಅನರ್ಹರನ್ನು ಕೈ ಬಿಟ್ಟು ಅರ್ಹ ಫಲಾನುಭವಿಗಳನ್ನು ಸೇರ್ಪಡೆ ಮಾಡಲು ನಿರ್ದೇಶನ ನೀಡಲಾಗಿರುತ್ತದೆ. ಯಾವುದೇ ಅವಧಿ ನಿಗದಿಪಡಿಸಿರುವುದಿಲ್ಲ.

(ಈ) ಬಿಪಿಎಲ್ ಪಡಿತರ ಚೀಟಿಗಳನ್ನು ನೀಡಲು ಶೇಕಡವಾರು ನಿಗದಿಪಡಿಸಿರುವುದಿಲ್ಲ. ಮನೆ ಮನೆ ಸಮೀಕ್ಷೆಯಂತೆ ಅರ್ಹರೆಂದು ಗುರುತಿಸಿದ ಫಲಾನುಭವಿಗಳಿಗೆ ಬಿಪಿಎಲ್ ಪಡಿತರ ಕೂಪನ್‌ಗಳನ್ನು ವಿತರಿಸಲಾಗಿದೆ.

735 (293) ಶ್ರೀ ನಿರಾಣಿ ಮುರುಗೇಶ್ ರುದ್ರಪ್ಪ (ಬೀಳಗಿ) ಕೃಷಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ಬೀಳಗಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ರೈತರ, ನೇಕಾರರ ಹಾಗೂ ಮೀನುಗಾರರ ಸಾಲಮನ್ನಾ ಆಗಿರುವುದೆಷ್ಟು ? (ಪ್ರತ್ಯೇಕ ಕುಟುಂಬವಾರು ವಿವರ ನೀಡುವುದು)

(ಆ) ಕೃಷಿ ಸಾಲವನ್ನು ಸಕಾಲಿಕವಾಗಿ ತುಂಬುತ್ತಿರುವ ರೈತರಿಗಾಗಿ ವಿಶೇಷ ಸವಲತ್ತುಗಳನ್ನು ನೀಡಲಾಗುವುದೇ ?

(ಇ) ಕೃಷಿ ಸಾಲ ಮಾಡದೆ ಚಿಕ್ಕ, ಅತೀ ಚಿಕ್ಕ ರೈತರಿಗೆ ಸರ್ಕಾರದಿಂದ ಸೌಲಭ್ಯಗಳನ್ನು ನೀಡಲು ಕ್ರಮ ಜರುಗಿಸಲಾಗುವುದೇ ?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು) :–

(ಅ) ಬೀಳಗಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ರೈತರ, ನೇಕಾರರ ಹಾಗೂ ಮೀನುಗಾರರ ಸಾಲಮನ್ನಾ ವಿವರ ಈ ಕೆಳಗಿನಂತಿದೆ.

	ರೈತರ ಕುಟುಂಬಕ್ಕೆ ಸಾಲ ಮನ್ನಾ				ನೇಕಾರ ಕುಟುಂಬಕ್ಕೆ ಸಾಲ ಮನ್ನಾ			
ಬೆಳಸಾಲ	ಸಂಖ್ಯೆ	ಅಸಲು	ಬಡ್ಡಿ	ಒಟ್ಟು	ಸಂಖ್ಯೆ	ಅಸಲು	ಬಡ್ಡಿ	ಒಟ್ಟು
25,000/– ಒಳಗಿನ ಸಾಲ ಮನ್ನಾ	2611	40173673	2170122	42343795	5	60000	5000	68000
25,000/– ಮೇಲ್ಪಟ್ಟು ಸಾಲ ಪಡೆದವರ	6283	157057000	20012546	177369546	2	50000	76000	126000
	8894	197230670	22482668	219713341	7	110000	34000	194000
ಮಾಧ್ಯಮಿಕ ಸಾಲದ ಮೇಲಿನ ಬಡ್ಡಿ ಮನ್ನಾ	20	–	286669	286669	–	–	–	–
ಸುಸ್ತಿ ಸಾಲದ ಮೇಲಿನ ಬಡ್ಡಿ	232	–	2666492	2666492	7	–	84000	84000
ಅಂತೂ ಒಟ್ಟು	9146	197230673	25435829	222666502	14	110000	168000	278000

ಬೀಳಗಿ ಮತಕ್ಷೇತ್ರದಲ್ಲಿ ಮೀನುಗಾರ ಕುಟುಂಬದವರು ಡಿ.ಸಿ.ಸಿ. ಬ್ಯಾಂಕುಗಳಿಂದ ಸಾಲವನ್ನು ಪಡೆದಿರುವುದಿಲ್ಲ.

(ಆ) ಕೃಷಿ ಸಾಲವನ್ನು ಸಕಾಲಿಕವಾಗಿ ತುಂಬುತ್ತಿರುವ ರೈತರಿಗೆ ಅವರವರ ಹಿಡುವಳಿಗನುಗುಣವಾಗಿ ಹಾಗೂ ಪತ್ತಿನ ಮಿತಿಗೆ ಒಳಪಟ್ಟು ಹೆಚ್ಚುವರಿ ಸಾಲ ನೀಡಲಾಗುತ್ತಿದೆ.

(ಆ) ಅಂತಹ ಯಾವುದೇ ಪ್ರಸ್ತಾಪವು ಸರ್ಕಾರದ ಮುಂದಿರುವುದಿಲ್ಲ.

736 (294) ಶ್ರೀ ನಿರಾಣಿ ಮುರುಗೇಶ್ ರುದ್ರಪ್ಪ (ಬೀಳಗಿ) ಕೃಷಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ಬೀಳಗಿ ಮತಕ್ಷೇತ್ರ ವ್ಯಾಪ್ತಿಯಲ್ಲಿ ಬೆಳೆ ವಿಮೆ ಮಾಡಿಸಿದ ರೈತರೆಷ್ಟು ;

(ಆ) ವಿಮಾ ಕೃಷಿಕರಿಗೆ ವಿಮಾ ಕಂಪನಿಯಿಂದ ವಿತರಿಸಿದ ಪರಿಹಾರ ಧನವೆಷ್ಟು ;

(ಇ) ಈ ವಿಮಾ ಹಣ ವಿತರಣೆಯಲ್ಲಿ ತಾರತಮ್ಯವಾಗಿರುವುದು ನಿಜವೇ ;

(ಈ) ಹಾಗಿದ್ದಲ್ಲಿ, ತಪ್ಪಿತಸ್ಥ ಕಂಪನಿಗಳ ವಿರುದ್ಧ ಕೈಗೊಳ್ಳುವ ಕ್ರಮವೇನು ;

(ಉ) ನೊಂದ ರೈತರಿಗೆ ಸರ್ಕಾರದಿಂದ ಪರಿಹಾರ ಕಲ್ಪಿಸಲಾಗುವುದೇ ?